**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.682/2023**

**CW-1 PW-1**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಮೋದಿನ್ ಬಿ |
| ಗಂಡ | ಃ | ಗಫೂರ ಸಾಬ |
| ವಯಸ್ಸು | ಃ | 26 |
| ಉದ್ಯೋಗ | ಃ | ಮನೆಗೆಲಸ |
| ವಾಸಸ್ಥಳ | ಃ | ಸಲಿಕ್ಯಾಪೂರ |
| ಪ್ರಮಾಣಿಕರಿಸಿದ ದಿನಾಂಕ | ಃ | **26-03-2026** |

---

**ಮುಖ್ಯ ವಿಚಾರಣೆ:-** **ಮಾನ್ಯ ಸ.ಸ.ಅ ರವರಿಂದ**

ಚಾಸಾ-2 ರಿಂದ 4, 6 ರಿಂದ 10 ಗೊತ್ತು. ಆರೋಪಿತರು ಗೊತ್ತು. ದಿನಾಂಕ 21.07.2022 ರಂದು ಜಿನ್ನಾಪೂರು ಗ್ರಾಮದಲ್ಲಿ 1 ನೇ ಆರೋಪಿ ಜೊತೆ ನನ್ನ ಮದುವೆ ಸಂಪ್ರದಾಯವಾಗಿ ಆಗಿರುತ್ತದೆ. ಮದುವೆ ಸಮಯದಲ್ಲಿ ಮಾತನಾಡಿದಂತೆ 2 ತೊಲೆ ಬಂಗಾರ ಮತ್ತು ಗೃಹ ಉಪಯೋಗಿ ವಸ್ತುಗಳನ್ನು ಕೊಟ್ಟು ಮದುವೆ ಮಾಡಿರುತ್ತಾರೆ. ಮದುವೆಯಾದ ನಂತರ ಆರೋಪಿತರು ನನ್ನನ್ನು ಒಂದು ತಿಂಗಳು ಚೆನ್ನಾಗಿ ನೋಡಿಕೊಂಡು ನಂತರ ಹಣ ಬಂಗಾರ ತರುವಂತೆ ಒತ್ತಾಯಿಸಿ ಆರೋಪಿತರು ಮತ್ತು ನಾದಿನಿಯರು ಪರ್ವಿನ್ ಬೇಗಂ, ಇಮಾಮ ಬಿ ಮತ್ತು ಮೈದುನರು ಸದ್ದಾಂ ಹುಸೇನ ಮತ್ತು ನಬಿ ರಸೂಲ್ ಹಾಗೂ ಮಾವ ಹುಸ್ಮಾನ ಸಾಬ ಇವರುಗಳು ನನಗೆ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡಿರುತ್ತಾರೆ. ಆರೋಪಿತರು ನನ್ನನ್ನು ಹೊಡೆದು ಗುಡ್ಡದಲ್ಲಿ ಹೂತ್ತಿಟ್ಟರೇ ಅವರಲ್ಲಿ ಕೇಳುವರು ಯಾರು ಇಲ್ಲ ಕೇಳಿದರೆ ಯಾರ ಜೊತೆ ಓಡಿ ಹೋಗಿರುತ್ತಾಳೆ ಎಂದು ಹೇಳಿದರೆ ಆಯ್ತು ಎಂದು ಮಾತನಾಡುತ್ತಿದ್ದರು. ದಿನಾಂಕ 20.11.2023 ರಂದು ರಾತ್ರಿ 8 ಗಂಟೆಗೆ ನನ್ನ ಗಂಡ, ಮಾವದ ನಾದಿನಿಯರು ಮತ್ತು ಮೈದುನರು ನನಗೆ ಹಣ ತರುವಂತೆ ಹೊಡೆ ಬಡೆ ಮಾಡಿ ನನ್ನನ್ನು ಕರೆದುಕೊಂಡು ಹೋಗಿ ತವರು ಮನೆಗೆ ಬಿಟ್ಟು ಬಂದಿರುತ್ತಾರೆ. ನನ್ನ ಮೈ ಮೇಲೆ ಇದ್ದ 15 ಗ್ರಾಂ ಬಂಗಾರವನ್ನು ಗಂಡನ ಮನೆಯಲ್ಲಿ ಬಿಟ್ಟು ಹೋಗಿರುತ್ತೇನೆ. ನಾನು ತವರು ಮನೆಗೆ ಹೋದ ನಂತರ ಹೊಂದಾಣಿಕೆ ಮಾಡಿಕೊಂಡು ಹೋಗಬೇಕು ಎಂದು ನಮ್ಮ ತಂದೆ ನನಗೆ ಹೇಳಿದ್ದು ನಾನು ಗಂಡನ ಮನೆಗೆ ಹೋಗಬೇಕು ಎನ್ನುವಷ್ಟರಲ್ಲಿ, 1 ನೇ ಆರೋಪಿ ನನ್ನ ಗಂಡ ದಿನಾಂಕ 16.03.2023 ರಂದು ಕಾಟಮಳ್ಳಿ ಗ್ರಾಮದ ಶಹನು ಬೇಗಂ ಎನ್ನುವವಳನ್ನು 2 ನೇ ಮದುವೆ ಮಾಡಿಕೊಂಡಿರುತ್ತಾನೆ ಎಂದು ತಿಳಿದು ಬಂದಿರುತ್ತದೆ. ನಂತರ ನಾನು ದಿನಾಂಕ 19.03.2023 ರಂದು ಗಬ್ಬೂರು

ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಸಹಿಯನ್ನು ನಿಪಿ-1ಎ ಎಂದು ಗುರುತಿಸಲಾಯಿತು. ನಂತರ ದಿನಾಂಕ 20.03.2023 ರಂದು ನನ್ನ ಗಂಡನ ಮನೆಯಲ್ಲಿ ಪೋಲಿಸರು ಚಾಸಾ-2-3 ರವರ ಸಮಕ್ಷಮ ಬೆಳಿಗ್ಗೆ 9.30 ರಿಂದ 10.30 ವರೆಗೆ ಪಂಚನಾಮೆ ಮಾಡಿ ಎರಡು ಭಾವಚಿತ್ರ ತೆಗೆದಿರುತ್ತಾರೆ. ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-2 ಮತ್ತು 3 ಎಂದು ಗುರುತಿಸಲಾಯಿತು. ಅ ಕುರಿತು ಪೋಲಿಸರಿಗೆ ಪುರವಣಿ ಹೇಳಿಕೆ ನೀಡಿರುತ್ತೇನೆ. ಮದುವೆ ಆಮಂತ್ರಣ ಪತ್ರಿಕೆಯನ್ನು ನಿಪಿ-4 ಎಂದು, ಮದುವೆ ಭಾವಚಿತ್ರಗಳನ್ನು ನಿಪಿ-5 ಮತ್ತು 6 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶವನ್ನು ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.